# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1703 |
| ಮಾನ್ಯ ಸದಸ್ಯರ ಹೆಸರು | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18.03.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರಾಮಠಾಣಾ ಎಂದರೆ ಏನು ಸದರಿ ಪ್ರದೇಶದ ದಾಖಲೆಗಳನ್ನು ನಿರ್ವಹಿಸುವ ಕಾರ್ಯವನ್ನು ಮಾಡುವವರು ಯಾರು; | ಭೂಮಾಪನ ಇಲಾಖೆಯ Karnataka Revenue Survey Manual (Vol-1) ಪ್ರಕಾರ, ಗ್ರಾಮಠಾಣಾ ಎಂದರೆ ಹಳ್ಳಿಯ ಜನವಸತಿ ಪ್ರದೇಶ ಅಥವಾ ಗ್ರಾಮದ ಜಾಗ (Village Site) ಎಂದು ಕರೆಯಲಾಗುತ್ತದೆ.<br><br>ರಾಜ್ಯದಲ್ಲಿ ಮೂಲ ಸರ್ವೆ ಹಾಗೂ ರೀಸರ್ವೆ ಕಾರ್ಯದ ಸಂದರ್ಭದಲ್ಲಿ ಕೃಷಿ ಜಮೀನುಗಳನ್ನು ಅಳತೆ ಮಾಡಿ ಗಡಿ ಗುರುತಿಸಿದ ನಂತರ ಉಳಿದ ಜನವಸತಿ ಪ್ರದೇಶಗಳನ್ನು ಜಮೀನಿನ ಸ್ಥಿತಿಯಂತೆ ಗುರುತಿಸಿ ಗ್ರಾಮ ನಕ್ಷೆಯಲ್ಲಿ "ಊರು" ಎಂದು ದಾಖಲಿಸಲಾಗಿದೆ. ಗ್ರಾಮಠಾಣಾ ವ್ಯಾಪ್ತಿಯ ಆಸ್ತಿಗಳ ದಾಖಲೆಗಳನ್ನು ಕಂದಾಯ ಇಲಾಖೆ ನಿರ್ವಹಿಸಿರುವುದಿಲ್ಲ ಅಥವಾ ಹಸ್ತಾಂತರಿಸಿರುವುದಿಲ್ಲ.<br><br>ಹಿಂದಿನ ವಿಲೇಜ್ ಪಂಚಾಯತಿಗಳಿಗೆ ಸ್ಥಳೀಯ ಗ್ರಾಮ ಲೆಕ್ಕಿಗರನ್ನು (Village Accountant) ಗ್ರಾಮ ಪಂಚಾಯತಿಯ ಪದನಿಮಿತ್ತ ಕಾರ್ಯದರ್ಶಿಗಳಾಗಿ ನೇಮಿಸಲಾಗುತ್ತಿತ್ತು. ಮಂಡಲ ಪಂಚಾಯತಿಗಳು ಅಸ್ತಿತ್ವಕ್ಕೆ ಬಂದ ನಂತರ ಕೆಲವೊಂದು ಮಂಡಲ ಪಂಚಾಯತಿಗಳಲ್ಲಿ ಕಾರ್ಯದರ್ಶಿಗಳನ್ನು ಜಿಲ್ಲಾಧಿಕಾರಿಗಳು ನೇಮಿಸಿದ್ದು, ಇನ್ನುಳಿದ ಮಂಡಲ ಪಂಚಾಯತಿಗಳಲ್ಲಿ ಕೃಷಿ ಇಲಾಖೆಯ ಹಿಂದಿನ ಗ್ರಾಮ ಸೇವಕರು (ಪ್ರಸ್ತುತ ಕೃಷಿ ಸಹಾಯಕರು) ಪದನಿಮಿತ್ತ ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗುತ್ತಿತ್ತು. ಸದರಿ ಅಧಿಕಾರಿಗಳು ಗ್ರಾಮ ಪಂಚಾಯತಿ ದಾಖಲೆಗಳನ್ನು ನಿರ್ವಹಿಸುತ್ತಿದ್ದಾರೆ. |
| (ಆ) | ಗ್ರಾಮಠಾಣಾ ವ್ಯಾಪ್ತಿಯ ಆಸ್ತಿಗಳಿಗೆ ಮೂಲ ದಾಖಲೆಗಳು ಎಂದರೆ ಯಾವುವು; ಯಾವ ಇಲಾಖೆಯು ಸದರಿ ದಾಖಲೆಗಳನ್ನು ನೀಡುವುದು; | ಮೂಲ ಭೂಮಾಪನ ಕಾರ್ಯ ಕೈಗೊಂಡ ಸಂದರ್ಭದಲ್ಲಿ ಗ್ರಾಮಠಾಣಾ ವ್ಯಾಪ್ತಿಯ ಆಸ್ತಿಗಳಿಗೆ ಪ್ರತ್ಯೇಕವಾಗಿ ಯಾವುದೇ ಮೂಲ ದಾಖಲೆಗಳನ್ನು ಸಿದ್ಧಪಡಿಸಲಾಗಿಲ್ಲ.<br><br>ಪ್ರಸ್ತುತ ಗ್ರಾಮೀಣ ಪ್ರದೇಶದ ಆಸ್ತಿಗಳ ನಿರ್ವಹಣೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು, ಸಂಬಂಧಿತ ಗ್ರಾಮ ಪಂಚಾಯಿತಿಗಳ ಮೂಲಕ ಈ ಕಾರ್ಯಗಳನ್ನು ನಿರ್ವಹಿಸಲಾಗುತ್ತದೆ. |
| (ಇ) | ಗ್ರಾಮಠಾಣಾ ವ್ಯಾಪ್ತಿಯ ಸ್ವತ್ತುಗಳು ಕ್ರಯ, ಅಡಮಾನ ಆಗದೇ ಪಿತ್ರಾರ್ಜಿತವಾಗಿ ಬಂದ ಸ್ವತ್ತುಗಳ ಮಾಲೀಕರು ಇ-ಖಾತಾ ಪಡೆಯಲು ಸಲ್ಲಿಸಬೇಕಾದ ದಾಖಲೆಗಳು ಯಾವುವು; | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025ರ ನಿಯಮ 5 ರಲ್ಲಿನ ವರ್ಗೀಕರಣಗಳಲ್ಲಿ ಗ್ರಾಮಠಾಣಾ ಆಸ್ತಿಗಳಿಗೆ ಸಂಬಂಧಿಸಿದಂತೆ ಅನುಬಂಧ-1 ರಲ್ಲಿ ನಮೂನೆ 11ಎ ವಿತರಣೆಗೆ ಈ ಕೆಳಕಂಡ ದಾಖಲೆಗಳನ್ನು ಮಾತ್ರ ಕಡ್ಡಾಯ ಮಾಡಲಾಗಿರುತ್ತದೆ. |

| | | |
|---|---|---|
| | ಗ್ರಾಮಠಾಣಾ ವ್ಯಾಪ್ತಿಯ ಸ್ವತ್ತುಗಳಿಗೆ ಸ್ವಾಮಿತ್ವ ಯೋಜನೆಯಲ್ಲಿ ಆಸ್ತಿ ಕಾರ್ಡ್ ವಿತರಿಸಲು ಇರುವ ಮಾರ್ಗಸೂಚಿಗಳು ಏನು; (ಪ್ರತಿಯನ್ನು ನೀಡುವುದು) | 1. ದಿಶಾಂಕ್/ತಹಶೀಲ್ದಾರರ ಗ್ರಾಮಠಾಣಾ ನಕ್ಷೆ.<br>2. ಕ್ರಯಪತ್ರ/ ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ರಿಲೀಜ್ ಡೀಡ್/ವರ್ಗಾವಣೆ/ ಸೆಟ್ಲಮೆಂಟ್/ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ / ಅದಲು ಬದಲು ಪತ್ರ.<br><br>ಆದ್ದರಿಂದ, ಮೇಲ್ಕಂಡ ದಾಖಲೆಗಳಲ್ಲಿ ದಿಶಾಂಕ್/ತಹಶೀಲ್ದಾರರ ಗ್ರಾಮಠಾಣಾ ನಕ್ಷೆ ಯೊಂದಿಗೆ ಇನ್ನುಳಿದ ಯಾವುದಾದರೂ ಒಂದು ದಾಖಲೆಯನ್ನು ಇ-ಸ್ವತ್ತು ತಂತ್ರಾಂಶದಲ್ಲಿ ಇಂಧೀಕರಿಸುವ ಮೂಲಕ ನಮೂನೆ 11ಎ ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಮುಂದುವರೆದು, ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ದಾಖಲೆಗಳಿಲ್ಲದ ಯಾವುದೇ ನೋಂದಾಯಿತ ಕಟ್ಟಡಗಳಿಗೆ ಸಂಬಂಧಿಸಿದಂತೆ ದಿನಾಂಕ:14-06-2013ರ ಪೂರ್ವದಲ್ಲಿ ಗ್ರಾಮ ಪಂಚಾಯತಿಯ ತೆರಿಗೆ ನಿರ್ಧರಣಾ ಪಟ್ಟಿಯಲ್ಲಿರುವುದನ್ನು (Scanned Document ಮತ್ತು ಪಂಚತಂತ್ರ ತಂತ್ರಾಂಶ) ಖಾತರಿಪಡಿಸಿಕೊಂಡು ಸಾರ್ವಜನಿಕ ಆಕ್ಷೇಪಣೆಗಳನ್ನು ಆಹ್ವಾನಿಸಿ, ಸ್ಥಳ ಮಹಜರ್ ಮಾಡಿ, ಆಕ್ಷೇಪಣೆಗಳನ್ನು ವಿಲೇಗೊಳಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ರ ಅನುಬಂಧ-2 ರಲ್ಲಿ ನಿಗಧಿಪಡಿಸಿರುವ ದಾಖಲಾತಿಗಳನ್ನು ಪಡೆದು ಕಟ್ಟಡದ ನಿರ್ಮಿತ ವಿಸ್ತೀರ್ಣಕ್ಕೆ ನಮೂನೆ-11ಬಿ ನೀಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.<br><br>ಆಸ್ತಿ ಕಾರ್ಡ್ ವಿತರಿಸಲು ಇರುವ ಮಾರ್ಗಸೂಚಿಗಳ ಪ್ರತಿಯನ್ನು ಅನುಬಂಧದಲ್ಲಿ ನೀಡಿದೆ. |
| (ಈ) | ಸ್ವಾಮಿತ್ವ ಯೋಜನೆಯಲ್ಲಿ ಬೆಂಗಳೂರು ನಗರ ಜಿಲ್ಲೆಯ ಎಷ್ಟು ಗ್ರಾಮಗಳ ಜನತೆಗೆ ಆಸ್ತಿ ಕಾರ್ಡ್ ವಿತರಿಸಲಾಗಿದೆ; ವಿತರಿಸದೇ ಇದ್ದಲ್ಲಿ ಕಾರಣಗಳೇನು; | ಸ್ವಾಮಿತ್ವ ಯೋಜನೆಯ ಮೂಲ ಉದ್ದೇಶ ಗ್ರಾಮೀಣ ಜನವಸತಿ ಪ್ರದೇಶದ ಆಸ್ತಿಗಳನ್ನು ದಾಖಲಿಸುವುದಾಗಿದೆ. ಬೆಂಗಳೂರು ನಗರ ಜಿಲ್ಲೆ ಬಹುಪಾಲು ನಗರೀಕರಣಗೊಂಡಿರುವುದರಿಂದ ಈ ಜಿಲ್ಲೆ ಸ್ವಾಮಿತ್ವ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. |
| (ಉ) | ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸ್ವಾಮಿತ್ವ ಯೋಜನೆಯ ಜಾರಿಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಸ್ವಾಮಿತ್ವ ಯೋಜನೆ ಗ್ರಾಮೀಣ ಜನವಸತಿ ಪ್ರದೇಶದ ಆಸ್ತಿಗಳಿಗೆ ಸಂಬಂಧಿಸಿದ್ದು, ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ನಗರ ಪ್ರದೇಶದ ಆಸ್ತಿಗಳಿಗೆ ಈ ಯೋಜನೆ ಅನ್ವಯಿಸುವುದಿಲ್ಲ. |
| (ಊ) | ಯಾವ ಕಾಲಮಿತಿಯಲ್ಲಿ ಆಸ್ತಿ ಕಾರ್ಡ್ ವಿತರಣೆ ಮಾಡಲಾಗುವುದು? | |

ಸಂಖ್ಯೆ: ಕಂಇ 58 ಎಸ್ ಎಸ್ ಸಿ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು